ಪಾಲಿಸಿಲ್ಲವೆಂಬ ದಿಟವನ್ನು ಕಂಡುಕೊಳ್ಳುತ್ತಾನೆ. ತನ್ನ ಗೆಳೆಯನಿಗೆ ಅವನ ಸಹಪಾಠಿಗಳು ಚಿತ್ರಹಿಂಸೆ ಕೊಡುತ್ತಿರುವಾಗ ಇವನು ಒಂದಿಷ್ಟೂ ಪ್ರತಿರೋಧ ತೋರಿರುವುದಿಲ್ಲ. ಅವರು ತನಗೂ ತೊಂದರೆ ಕೊಡಬಹುದೆಂಬ ಭಯದಿಂದ 'ಅಪರಿಚಿತ'ನಂತೆ ವರ್ತಿಸುತ್ತಾನೆ. ಆ ಬಳಿಕವೂ ತನ್ನ ಹೆಂಡತಿ ತಮಾರಾ ದೂರವಾದ ಮೇಲೆ ತಾನು ಅಮಾನವೀಕರಣಗೊಂಡಿರುವ ಬಗೆ ಅವನಿಗೆ ತಿಳಿಯುತ್ತದೆ. ಅವನ ಹಾಗೆ ನಾವು ಕೂಡ 'ಜಡ್ಜ್‌ಮೆಂಟ್' ಕೊಡುವ ನ್ಯಾಯಮೂರ್ತಿಗಳೇ ಆಗಿರುವುದು ನಮ್ಮ ಕಣ್ಣಿಗೆ ಕಟ್ಟುತ್ತದೆ. 'ದುರುಳ'ನಂತೆ ಕಾಣುವವನು 'ದುರಂತನಾಯಕ'ನಾಗಿ, ಅವನ ಮೇಲೆ ಕಲ್ಲೆಸೆಯುವವರು 'ಖಳ'ರಾಗುವುದು ಈ ಕಾದಂಬರಿಯ ವ್ಯಂಗ್ಯ. ಆದರೆ ಗ್ರಾಸ್‌ಮನ್ ಅವರನ್ನೂ ಹಾಗೆ ನೋಡುವುದಿಲ್ಲ. ಆದ್ದರಿಂದಲೇ ಅನೇಕ ವಿಮರ್ಶಕರು ಈ ಕಾದಂಬರಿಯನ್ನು ಕಾಫ್ಕನ 'ದಿ ಜಡ್ಜ್‌ಮೆಂಟ್' ಮತ್ತು ದಸ್ತೋವಸ್ಕಿಯ 'ನೋಟ್ಸ್ ಫ್ರಂ ದಿ ಅಂಡರ್ ಗ್ರೌಂಡ್'ಗೆ ಹೋಲಿಸಿದ್ದಾರೆ.

ಮನುಷ್ಯನ ಬದುಕನ್ನು ಘನತೆಯಿಂದ ನೋಡದ ರಾಜಕೀಯ ವ್ಯವಸ್ಥೆಯೊಳಗೆ ಬದುಕುವ ಮತ್ತು ಬರೆಯುವ ಲೇಖಕನ ಕಷ್ಟ, ಆಂತರಿಕ ಸಂಘರ್ಷಗಳನ್ನು ಈ ಕಾದಂಬರಿಯು ನಿರೂಪಿಸುತ್ತದೆ. ಹೇಳಲೇಬೇಕಾದ ಯಾವ ಸಂಗತಿಯನ್ನೂ ನೇರವಾಗಿ ಹೇಳಲಾಗದ ವ್ಯವಸ್ಥೆಯಲ್ಲಿ, ಖಾಸಗಿ ಬದುಕು ತನ್ನ 'ಖಾಸಗಿತನ'ವನ್ನು ಕಳೆದುಕೊಳ್ಳುತ್ತಿರುವ ಹೊತ್ತಿನಲ್ಲಿ ಸಾಹಿತಿಗಳು ಪ್ರತಿಮೆ, ಸಂಕೇತ ಮತ್ತು ರೂಪಕಗಳ ಭಾಷೆಯನ್ನು ಬಳಸುವುದು ಎಷ್ಟು ಅನಿವಾರ್ಯ ಎಂಬುದಕ್ಕೆ ಈ ಕಾದಂಬರಿ ಒಳ್ಳೆಯ ಉದಾಹರಣೆ. ಧ್ಯಾನಸ್ಥ ಸ್ಥಿತಿಯಲ್ಲಿ ಅನಿಯಂತ್ರಿತವಾಗಿ ಒಡಮೂಡುವ ರೂಪಕಗಳು ಸತ್ಯ ಮತ್ತು ಕಲೆ ಎರಡನ್ನೂ ಹೇಗೆ ಒಳಗೊಂಡಿರುತ್ತವೆ ಎಂಬುದು ಶೀರ್ಷಿಕೆಯಿಂದ ಮೊದಲುಗೊಂಡು ಒಟ್ಟಾರೆ ಕಾದಂಬರಿಯು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಈ ಕಾದಂಬರಿಯಲ್ಲಿ ಕುದುರೆಯು ಬಾರಿಗೆ ಬಂದು ಕುಡಿಯುವ ಜೋಕು ಇಂತಹುದು. 'ಕುದುರೆಯು ಬಾರಿಗೆ ಬರುವುದು' ಪಾಶ್ಚಾತ್ಯ ಪಾನಪ್ರಿಯರಲ್ಲಿ ಬಹಳ ಜನಪ್ರಿಯವಾದ ಜೋಕುಗಳಲ್ಲಿ ಒಂದು. '**A horse came into a bar**' ಎಂದು ಮೊದಲಾಗುವ ನೂರಾರು ಜೋಕುಗಳಿವೆ. ಆದರೆ, ಈ ಕಾದಂಬರಿಯಲ್ಲಿ ಡ್ರೈವರ್ ಹೇಳುವ 'ಕುದುರೆ ಜೋಕು' ಆ ಪಟ್ಟಿಯಲ್ಲಿ ಇಲ್ಲ. ಅದನ್ನು ಗ್ರಾಸ್‌ಮನ್ ಸೃಷ್ಟಿಸಿರುವಂತೆ ಕಾಣುತ್ತದೆ. ಅದನ್ನು ಹೇಳುತ್ತಿರುವ ಡ್ರೈವರ್‌ಗೆ ಹೊಟ್ಟೆ ಹುಣ್ಣಾಗಿಸುವಂತೆ ಮಾಡಿದರೆ, ಕೇಳುತ್ತಿರುವ ದೊವಾಲೆಗೆ ಬೋರ್ ಅನ್ನಿಸುತ್ತದೆ. ಹಾಗೆ ನೋಡಿದರೆ, ಅದರಲ್ಲಿ ನಗು ತರಿಸುವಂತಹುದೇನೂ ಇಲ್ಲ. ಅದು ಸಾವಿನ ಸುದ್ದಿಯನ್ನು ಮರೆಮಾಚುವ ಒಂದು ಪ್ರಯತ್ನ ಮಾತ್ರ. ಈ ವಿರೋಧಾಭಾಸವು ಜೋಕ್ ಹೇಳುವುದೇ ಬೇರೆ ಮತ್ತು ಹಾಸ್ಯಪ್ರಜ್ಞೆಯೇ ಬೇರೆ ಎಂಬ ವ್ಯತ್ಯಾಸವನ್ನು ನಮಗೆ ತೋರಿಸುತ್ತದೆ. ಈಗ ಸ್ವತಃ ದೊವಾಲೆಯೇ 'ಸ್ಟಾಂಡ್ ಅಪ್' ಪ್ರದರ್ಶನದಲ್ಲಿ ಅಂತಹ ಅರ್ಥರಹಿತವೆನಿಸುವ 'ಹುಸಿಪಟಾಕಿ' ಜೋಕುಗಳನ್ನು ಹೇಳುತ್ತಿರುವುದು ಇನ್ನೊಂದು ವ್ಯಂಗ್ಯ. ಹಾಗೆಯೇ, ಕೇವಲ ಅಕ್ಷರಗಳ ಮೂಲಕ ನಮ್ಮ ಅಭಿಪ್ರಾಯ/ಭಾವನೆಗಳನ್ನು ವಾಚ್ಯವಾಗಿ ವ್ಯಕ್ತಪಡಿಸಿದ ಮಾತ್ರಕ್ಕೆ ಯಾವ ಬರವಣಿಗೆಯೂ ಮಹತ್ವದ್ದಾಗಲಾರದು. ಬಾಹ್ಯ ಸನ್ನಿವೇಶದ ಬಗ್ಗೆ ಭಾಷಣ ಮಾಡದೆ ಧ್ವನಿಶಕ್ತಿಯಿಂದ ಮಾತನಾಡುವ ಇಂತಹ ಕಾದಂಬರಿಯು ನಮ್ಮ ಈ ಹೊತ್ತಿನ ತಲ್ಲಣಗಳಿಗೆ ಹೊಸಮಾರ್ಗ ತೋರಬಲ್ಲದು.

ಕಾಯಿಲೆ, ಸಾವು ಮತ್ತು ಯುದ್ಧ ಈ ಮೂರು ವಿಷಯಗಳ ಬಗ್ಗೆ ಮೇಲಿಂದ ಮೇಲೆ